

# ನಕ್ಕುಬಿಡಿ



ಎಂಜಿನಿಯರಿಂಗ್ ಕಾಲೇಜಿನ ಎಲ್ಲಾ ಪ್ರೊಫೆಸರ್‌ಗಳನ್ನು ಒಂದು ವಿಮಾನದಲ್ಲಿ ಕೂರಿಸಲಾಯಿತು. ಎಲ್ಲರೂ ಕೂತಾಗ ಪೈಲಟ್ ಘೋಷಿಸಿದ. 'ನೀವು ಕೂತಿರುವ ಈ ವಿಮಾನವನ್ನು ನಿಮ್ಮ ಕಾಲೇಜಿನ ವಿದ್ಯಾರ್ಥಿಗಳು ತಯಾರಿಸಿದ್ದಾರೆ. ಇದನ್ನು ಕೇಳಿ ನಿಮಗೆಲ್ಲಾ ತುಂಬಾ ಸಂತೋಷವಾಗಬಹುದು.'

ಹೀಗೆ ಹೇಳುವುದನ್ನು ಕೇಳಿದೊಡನೆಯೇ ಎಲ್ಲಾ ಪ್ರೊಫೆಸರ್‌ಗಳು ವಿಮಾನದಿಂದ ಕೆಳಗಿಳಿದರು. ಆದರೆ, ಪ್ರಿನ್ಸಿಪಾಲರು ಮಾತ್ರ ಅಲ್ಲಿಯೇ ಕೂತಿದ್ದರು.

'ಸಾರ್, ನೀವ್ಯಾಕೆ ಇಳಿಯುತ್ತಿಲ್ಲ?' ಪ್ರಿನ್ಸಿಪಾಲರನ್ನು ಕೇಳಲಾಯಿತು.

'ನನಗೆ ನನ್ನ ವಿದ್ಯಾರ್ಥಿಗಳ ಬಗ್ಗೆ ಪೂರ್ಣ ಭರವಸೆಯಿದೆ. ನೋಡಿ, ಈ ವಿಮಾನ ಸ್ಟಾರ್ಟ್ ಸಹ ಆಗಲ್ಲ!' ಎಂದು ಅವರು ಆರಾಮಾಗಿ ಕೂತರು.

★★★

'ನೋಡಪ್ಪ, ಈ ಐದು ರೂಪಾಯಿ ತಗೋ. ಒಂದು ಒಳ್ಳೆ ಬೀಡಾ ಹಾಕು. ಹಾಂ, ಬೀಡಾಕ್ಕೆ ಒಂದು ಏಲಕ್ಕಿ ಹಾಕು, ಸ್ವಲ್ಪ ಪೆಪ್ಪೆರ್‌ಮೆಂಟ್ ಹಾಕು.'

'ಆಗ್ಲಿ.'

'ಒಳ್ಳೆ ಕಾನ್‌ಪುರ್ ಮಸಾಲೆ ಹಾಕು.'

'ಆಗ್ಲಿ.'

'ಸ್ವಲ್ಪ ಗುಲಕಂದ್ ಸಹ ಹಾಕು.'

'ಆಗ್ಲಿ... ಆಗ್ಲಿ.'

'ನಿನ್ನ ಹತ್ರ ಮೆಣಸಿನ ಕಾಳು ಇರಬೇಕಲ್ಲ?'

'ಇದೆ.'

'ಅದನ್ನೂ ಹಾಕು. ಲವಂಗ ಇದ್ದರೆ ಅದನ್ನೂ ಹಾಕಿಬಿಡು.'

ಗಿರಾಕಿಯ ಇಷ್ಟಲ್ಲಾ ಬೇಡಿಕೆಗಳನ್ನು ಕೇಳಿದ ಮೇಲೆ ಬೀಡಾವಾಲಾ ಹೇಳಿದ; 'ಸಾರ್, ಇನ್ನು ಒಂದು ವಸ್ತು ಹಾಕೋದು ಉಳಿದಿದೆ.'

'ಏನು?'

'ನಿಮ್ಮ ಈ ಐದು ರೂಪಾಯಿ. ಅದನ್ನೂ ಹಾಕಿಬಿಡ್ತೀನಿ!'

★★★



ಪತ್ರಕರ್ತ ಬೆಲೆ ಏರಿಕೆಯ ಬಗ್ಗೆ ಜನರ ಅಭಿಪ್ರಾಯಗಳನ್ನು ಕಲೆಹಾಕುತ್ತಿದ್ದ. ಕಡೆಗೆ ರಸ್ತೆ ಬದಿಯಲ್ಲಿ ಕೂತ ಭಿಕ್ಷುಕನ ಬಳಿ ಹೋಗಿ ಕೇಳಿದ, 'ಏನಪ್ಪ, ಅಕ್ಕಿ ತುಂಬಾ ದುಬಾರಿಯಾಗಿದೆ, ಈ ಬಗ್ಗೆ ನೀನೇನು ಹೇಳ್ತೀಯ?'

'ದುಬಾರಿಯಾಗಿದೆಯಾ? ಯಾವಾಗಿನಿಂದ?' ಭಿಕ್ಷುಕ ಎದ್ದು ನಿಂತು ರೇಗಿದ, 'ಈಗ್ಲೇ ರೇಶನ್ ಅಂಗಡಿಗೆ ಹೋಗ್ತೀನಿ. ನಾನು ಬೆಳಿಗ್ಗೆಯಷ್ಟೆ, ಹಳೆ ರೇಟಿಗೆ ಅಕ್ಕಿ ಮಾರಿದ್ದೆ!'

★★★

ಒಬ್ಬ ಮರೆಗುಳಿ ಶಿಕ್ಷಕರಿದ್ದರು. ಅವರು ತಮ್ಮ ಕೈಗಡಿಯಾರವನ್ನು ಸದಾ ಎಡ ಜೇಬಿನಲ್ಲಿ ಇಟ್ಟುಕೊಳ್ಳುತ್ತಿದ್ದರು. ಒಮ್ಮೆ ಮರೆತು ಅದನ್ನು ಬಲ ಜೇಬಿನಲ್ಲಿ ಇಟ್ಟುಕೊಂಡರು. ಸಮಯ ನೋಡಬೇಕೆನಿಸಿದಾಗ ಎಡ ಜೇಬಿಗೆ ಕೈ ಹಾಕಿದರು. ಅಲ್ಲಿ ಕೈಗಡಿಯಾರ ಇರಲಿಲ್ಲ. ಆಗ ಅವರು ಕೂಡಲೇ ಎದುರಿಗಿದ್ದ ಶಿಷ್ಯನಿಗೆ ಹೇಳಿದರು, 'ಮನೆಗೆ ಹೋಗಿ ನನ್ನ ಕೈಗಡಿಯಾರವನ್ನು ತೆಗೆದುಕೊಂಡು ಬಾ.'

ಆ ಶಿಷ್ಯ ಹೊರಡುವಾಗ, ಶಿಕ್ಷಕರು ತಮ್ಮ ಬಲ ಜೇಬಿನಿಂದ ಕೈಗಡಿಯಾರ ಹೊರ ತೆಗೆದು ಸಮಯ ನೋಡುತ್ತಾ ಹೇಳಿದರು, 'ಈಗ 11.15 ಗಂಟೆ, ನೀನು 11.25 ರೊಳಗೆ ಬರಬೇಕು!'

**(ಸಂ) ಡಿ.ಎನ್. ಶ್ರೀನಾಥ್**



